ಬಿಡತಿರ್ಲಿಲ್ಲ, ಹಿಂದೆ. ಬಂದೋರೆ ಆ ಸಿನಿಮಾ ಹಾಡನ್ನ ಶಿಳ್ಳೇಲಿ ಮಗುಚಿಹಾಕ್ಬಿಡೋರು ಹಂಗಂಗೆ ಗೊತ್ತ!' ಹೆಂಗಸರಿಬ್ಬರೂ ನಿಟ್ಟುಸಿರಾದರು.

ಗೀತಾ ಒಳ ಹೋಗಿ ಕುರುಕು ತಂದಿಟ್ಟು ರಾಜಿಗೆ ಕೆಲಸ ಹೇಳಿಬಂದಳು. ನೆನಪಿಸಿಕೊಂಡಂತೆ ಕೇಳಿದಳು.

''ಪದ್ಮ, ಎದುರುಮನೇಗೆ ಒಬ್ರು ಅಜ್ಜಯ್ಯ ಬರ್ತಾರೆ, ಕಸಗುಡಿಸಿ ಒಂದಿಪ್ಪತ್ತು ರೂಪಾಯಿ ಈಸಿ ಹೋಗ್ತಾರೆ. ಯಾವತ್ತೂ ಅಳತೆಗೆ ಮೀರಿದ ಯಾರದ್ದಾದರೂ ಕೊಟ್ಟಿರೋ ಚಪ್ಪಲಿನ ಹಾಕ್ಕೊಂಡಿರ್ತಾರೆ ನೋಡಿ, ತುಂಬಾ ಗಟ್ಟಿಯಾಗಿ ಮಾತಾಡತಾರೆ, ತುಂಬ ವಯಸ್ಸಾಗಿದೆ.' ಪದ್ಮ ಯೋಚಿಸಿ ಗೊತ್ತಿಲ್ಲ ಎಂಬಂತೆ ತಲೆ ಅಲ್ಲಾಡಿಸಿದಳು.

''ಯಾವಾಗಲೂ ತೆಂಗಿನ ಗರಿ ಎಳಕಂಡು ಹೋಗತಿರುತ್ತೆ ಇಲ್ಲಾ... ಬೀದಿಲಿ ಬಿದ್ದ ರಟ್ಟುಗಳನ್ನ ಎತ್ತಿ ಕಂಕುಳಲ್ಲಿ ಜೋಡಿಸಿಕೊಂಡು ಹೋಗಿರುತ್ತೆ ಅಜ್ಜ.' ಆಗ ಪದ್ಮ ಜ್ಞಾನೋದಯವಾದಂತೆ ನಗು ಬೆರೆತ ದನಿಯಲ್ಲಿ ಹೇಳಿದಳು.

'ಹಾಂ! ಅದಾ ನಮ್ಮ ಗೊಲ್ಲಹಳ್ಳಿ ಕಣದಣ್ಣಯ್ಯ... ನಾವು ಅವ್ರನ್ನ ಅಂಗೇ ಕರೆಯೋದು. ಹಿಂದೆ ನಮ್ಮ ಕಡೆಗೆ ಅವರಂಗೆ ಕಣ ಮಾಡತಿದ್ದೋರು ಯಾರೂ ಇರ್ನಿಲ್ಲ. ಅಷ್ಟು ಅಚ್ಚುಕಟ್ಟು. ನೆಲದಲ್ಲಿ ಕುಂತು ಊಟ ಮಾಡೋ ಹಂಗೆ ಇರೋದು, ಅವ್ರು ಭತ್ತ-ರಾಗಿ ಒಕ್ಕಲಾಟ ಮಾಡಕಂಡು ಆದಮೇಲೆ ಅವ್ರ ಕಣದಲ್ಲಿ ಬೇರೇವ್ರು ಬಂದೂ ಬಂದೂ ಹುಲ್ಲು ಒಕ್ಕೊಳರು, ಹಂಗಿರೊದು ಅವರ ಕಣ. ಕಣ ಸಾರುಸವಾಗ ಎಲ್ರಿಗೂ ಬಂದು ಕೈ ಜೋಡಿಸಿ ವೈನ ಮಾಡಿಕೊಡರು. 'ಕಣ ಚೆನ್ನಾಗಿ ಮಾಡದಿದ್ರೆ ಹೆಂಗಸ್ರಿಗೆ ರಾಗಿಭತ್ತದಲ್ಲಿ ಕಲ್ಲು ಸೋಸದ್ರಲ್ಲಿ ಕೈ ಸೋತು ಹೋತವೆ ಕಣಪ್ಪ' ಅಂತ ಕಿವಿಮಾತು ಹೇಳದು, ಅದಕ್ಕೆ ಅದನ್ನ 'ಕಣದಣ್ಣಯ್ಯ' ಅಂತಿದ್ವಿ' - ನಸು ನಗುತ್ತ ಹುಬ್ಬೇರಿಸಿದ ಗೀತಾಳನ್ನು ನೋಡಿ ಇವಳು ಹೇಳಿದಳು.

'ಅವು ಬಡವ್ರು ಅಣ್ಣಂಬೇಡಿ, ಪೈಸೆಗೆ ಪೈಸೆ ಕಳಿದಿರಂಗೆ ಅವರ ಮಕ್ಕಳಿಬ್ರೂ ಮೂರಂತಸ್ತಿನ ಮನೆಗಳನ್ನ ಕಟ್ಟಿ ಬಾಡಿಗೆ ಕೊಟ್ಕಂಡು ಈಗಲೂ ಊರಿಗೆ ಒಕ್ಕಲಾಗಿದಾರೆ, ಆದ್ರೆ ಇಬ್ರು ಸೊಸೇರೂ ಮಾತ್ರ ಇದನ್ನ ಬಾಳ ತಾತ್ಸಾರ ಮಾಡವ್ರು ನೋಡಿ... ಇದು ತಪ್ಪಲ್ವಾ? 'ಅವ್ರು ಬಿಟ್ಟು ಹೋದ ಬದುಕನ್ನೇ ಅಲ್ವಾ ನಾವು ತಿರುವಿ ಹಾಕೋದು...' ಅಲ್ಲಿಇಲ್ಲಿ, ತಿರಿಕ್ಕಂಡು ಇದು ಹಿಂಗಾಡುತ್ತೆ ಅಂತ ಅಲ್ಲಗಳೀತಾರೆ. ಹಿಂದಿಂದಲೂ ಬೆಳಿಗ್ಗೆ ಬೆಳಿಗ್ಗೇನೆ ಎದ್ದು ಕೆಲಸ ಬೊಗಸೆ ಮಾಡಿದವರಲ್ವಾ? ಕೂತುಂಡು ಗೊತ್ತಿಲ್ಲ. ದನಕರಿನ ಹಿಂದೇನೆ ಕುಳ್ಳು ಎತ್ತದವ್ರು. ನೆಲ ಭೂಮಿ ಉಳುವನಿಗೆ ಕಸಕಡ್ಡಿನ ತಿಪ್ಪೆ ಮಾಡಿ ಕರಗ್ಸದು ಗೊತ್ತಿರುತ್ತೆ, ಹಂಗೆ ಏನು ಕಸ ಬಿದ್ರೂ ಎತ್ತಿ ತಿಪ್ಪೆ ಬೆಳೆಸೋದು ರೂಢಿನೂ ಆಗಿರುತ್ತೆ.

ಹಿಂಗೆ ಭೂಮಿ ಹೋದ್ ಮೇಲೆ ಏನ್ ಮಾಡದು? ಎತ್ತ ಮಾಡದು? ಅಂತ ದಿಕ್ಕು ತೋಚದಿರಂಗೆ ಆಗಬುಡತರೆ ಗೀತಾವ್ರೇ. ನಾವು ಕಣ್ಣಿಂದ ನೋಡಿದೀವಲ್ಲ ಈ ಪಡಿಪಾಟಲನ್ನ, ತಮಗೆ ಗೊತ್ತಿಲ್ಲದಿರ ಬಾಳ್ವೆ ಮಾಡೋದು ಏನು ಸುಲಭಾನಾ? ಕಣದಣ್ಣಯ್ಯರಿಗೂ ಮೊದಲು ಒಂದಿಪ್ಪತ್ತು ತೆಂಗಿನ ಮರ ಇದ್ದು. ಬಿದ್ದ ಗರೀಲಿ ಪೊರಕೆ ಮಾಡದು. ಮಾರಕಳದು, ಆ ಕಾಲದಿಂದನೂ ಅದೇ ಅಭ್ಯಾಸ. ಈಗೂ ಗರಿ ಬಿದ್ರೆ ಎಳಕಂಡುಬಂದು ಪೊರಕೆ ಕಡ್ಡಿ ಕಟ್ಟಿ ಈ ವಯಸ್ಸಲ್ಲೂ ದುಡಕಂಡು ತಿಂತಿತ್ತು ನೋಡಿ. ಇದು ತಪ್ಪಾ? ಇದನ್ನ ನೋಡಿದ್ರೆ ಸಾಕು, ಮಕ್ಳು ಸೊಸೇರು ರೇಗಾಕಿ ಬಿಡವ್ರು.

ದನ್ನ ಕಿವಿಗೂ ಹಾಕಂದಲೇ ದಿನಕ್ಕೆ ಅಲ್ಲಿ ಇಲ್ಲಿ ಒಂದುನೂರು ರೂಪಾಯಿ ಕೈಕಾಸು ಸಂಪಾದನೆ ಮಾಡಕಂಡು ತನ್ನ ಪಾಡಿಗೆ ತಾನಿರತಿತ್ತು. ಅವರ ಮನ್ನಿ ಮೂರು ಮಹಡಿ ಆದ ಮೇಲೆ ನಾಕನೆದ್ರಲ್ಲಿ ಒಂದು ರೂಮು ಐತೆ, ಅಲ್ಲಿ ತಾನೇ ಒಂದು ಮುದ್ದೆ ಮಾಡಕಂಡು ಊಟ ಮಾಡುತಿತ್ತು. ಮಕ್ಳು ಅದೂ ಇದೂ ಸಾರು ಪಲ್ಯ ಕೆಳಗಿನ ಮನೆಯಿಂದ ತಂದುಕೊಡತಿದ್ರು. ಮುಖ ತಿರುಗುಸ್ಕೊಂಡು ಈಸ್ಕಂಡು ಊಟ ಮಾಡದು. ನಾವು ಅದನ್ನ ಕಂಡೂ ಅಷ್ಟೆ, ಎಳಕಬಂದು ಊಟ ಮಾಡಿಸಿ ಕಳ್ಸತಿದ್ವಿ. ಪಾಪಾ! ಈಗ ಬಾ ಅಂದ್ರೆ ಬರುತ್ತಾ? ಹಿಂದೆ ನಮ್ಮನೆಗೆ ಬಂದು ನಮ್ಮಪ್ಪಂಗೆ ಎಲ್ಲಾ ಕೆಲಸದಾಗೂ ಕೈ ಜೋಡಿಸದು.' ಉಸಿರು ಬಿಟ್ಟ ಪದ್ಮಳಿಗೆ ಗೀತಾ ಕೇಳಿದಳು.

'ಯಾಕೆ ಪದ್ಮ, ಎಲ್ಲಿಗೋದ್ರು ಅಜ್ಜ? ನಮ್ಮನೇಲೂ ಅವರತ್ರ ಕಡ್ಡಿಪೊರಕೆ ತಗೋತಿದ್ವಿ. ಆಗ ಕಾಫಿ ಕೊಟ್ರೆ ಕುಡಿತಿತ್ತು.' ಪದ್ಮ ಉದ್ಗಾರ ತೆಗೆದಳು.

'ಓ, ಸತ್ತೋಯ್ತಲ್ಲ! ನಿಮಗೊತ್ತಿಲ್ವಾ? ಸರಿಸರಿ, ನೀವು ಹೋದ ತಿಂಗಳು ಬೇಸಿಗೆ ರಜಕ್ಕೆ ಅಮ್ಮನ